ಲಿಂಗರಾಜು
**ಪಿಡಬ್ಲ್ಯೂ-3**

**ದಿನಾಂಕ 05.03.2025 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು ಪ್ರತಿವಾದಿಯ ಪರ ಶ್ರೀ ಎಸ್ ಬಿ ಜಿ ವಕೀಲರವರಿಂದ:

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಶೆಟ್ಟಿಹಳ್ಳಿ ನಿವಾಸಿ. ವಾದಿ ಮತ್ತು ಅವರ ಮಕ್ಕಳ ಬಗ್ಗೆ ನನಗೆ ಗೊತ್ತು. ವಾದಿಯರು ನಮ್ಮ ಸಂಬಂಧಿಕರಲ್ಲ, ನಮ್ಮ ಗ್ರಾಮದವರು.

**2.** ದಾವಾ ಸ್ವತ್ತಿನ ಸ್ವತ್ತಿನ ಪೂರ್ವಕ್ಕೆ ನಮ್ಮ ಮನೆ ಇದೆ. ನಮ್ಮ ಮತ್ತು ವಾದಿಯರ ಮನೆಗೆ 3 ಅಡಿ ಗಲ್ಲಿ ಇದೆ. ವಾದಿಯರ ದಾವಾ ಸ್ವತ್ತಿನ ಮನೆಗೆ ಪಶ್ಚಿಮಕ್ಕೆ ರಸ್ತೆ ಇದೆ. ನಮ್ಮ ಮನೆಗೂ ಸಹಾ ಪಶ್ಚಿಮಕ್ಕೆ ರಸ್ತೆ ಇದೆ. ಒಂದೇ ಸಾಲಿನಲ್ಲಿ ನನ್ನ ಮತ್ತು ವಾದಿಯರ ಮನೆ ಇರುತ್ತದೆ. ನನ್ನ ಮತ್ತು ವಾದಿಯರ ಮನೆಯ ಉತ್ತರಕ್ಕೂ ರಸ್ತೆ ಇದೆ ಎಂದರೆ ಸರಿ.

**3.** ಪಂಚಾಯತಿಯವರು ರಸ್ತೆಯನ್ನು ಮಾಡಲು ದಾವಾ ಸ್ವತ್ತಿನ ದಕ್ಷಿಣಕ್ಕೆ ಮಣ್ಣನ್ನು ಹಾಕಿರುತ್ತಾರೆ. ವಾದಿಯರ ದಾವಾ ಸ್ವತ್ತಿನ ದಕ್ಷಿಣಕ್ಕೆ ಒಂದುವರೆ ಅಡಿ ಗಲ್ಲಿ ಇರುತ್ತದೆ. ಗಲ್ಲಿ ನಂತರ ಅಂಜನಿಯವರ ಮನೆ ಇರುತ್ತದೆ. ಒಂದುವರೆ ಅಡಿ ಗಲ್ಲಿಗೆ ಪಂಚಾಯತಿಯವರು ರಸ್ತೆ ನಿರ್ಮಾಣ ಮಾಡಲು ಮಣ್ಣನ್ನು ಹಾಕಿರುತ್ತಾರೆ.

**4.** ನನ್ನ ತಂದೆ ನಿಂಗೇಗೌಡರಿಂದ ವಾದಿ ರಾಮೇಗೌಡರು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತು ನಮಗೆ ಮೂಲತಃ ನಮಗೆ ನನ್ನ ತಾತನಿಂದ ಬಂದಿರುತ್ತದೆ. ನನ್ನ ತಾತ ಈಗ ಮೃತ ಹೊಂದಿರುತ್ತಾರೆ. ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ವಾದಿಯರು 17 ಅಡಿ ಬಿಟ್ಟಿದ್ದು, ಪಂಚಾಯತಿಯವರು ರಸ್ತೆ ಮಾಡಲು ಬಂದಿರುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ರಸ್ತೆ ಇದ್ದು, ಸಾರ್ವಜನಿಕರು ಅಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ರಸ್ತೆಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯು ಈ ಸುಳ್ಳು ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ರಸ್ತೆಯನ್ನು ಉಪಯೋಗಿಸಲು ಸಾರ್ವಜನಿಕರಿಗೆ ತೊಂದರೆ ಕೊಡಬಾರದು ಎಂದು ಪಂಚಾಯತಿವರು ವಾದಿಗೆ ನೋಟಿಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ಪಂಚಾಯತಿಯವರು ನೀಡಿರುವ ನೋಟಿಸಿನಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು
ಜೆ.ಎಂ.ಎಫ್.ಸಿ, ಪಾಂಡವಪುರ